ಓ.ಎಸ್. ನಂ. 19/2015
ಪಿ.ಡಬ್ಲ್ಯೂ- 2

(ಇಂದು ದಿಃ 28-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು :- ಶ್ರೀ.**H.S.R** ವಕೀಲರಿಂದ :-

ನನ್ನ ತಂದೆ ಹೆಸರು ಮೊಗಲಪ್ಪ ಬೆಸ್ತ. ನನ್ನ ತಾಯಿ ಹೆಸರು ಬಿಚ್ಚಮ್ಮ. ನನ್ನ ತಂದೆ ಮೊಗಲಪ್ಪನ ತಂದೆ ಹೆಸರು ಆಶಪ್ಪ. ನನ್ನ ತಾತನ ಮತ್ತು ತಂದೆಯ ಊರು ಚಂದ್ರಕಲಾ ಎಂದರೆ ಸರಿ. ಅವರು ಅಲ್ಲೆ ಹುಟ್ಟಿ ಅಲ್ಲೆ ತೀರಿಹೋಗಿದ್ದಾರೆ ಎಂದರೆ ಸರಿ. ನಾನು ಕೂಡ ಅಲ್ಲೆ ವಾಸ ಇದ್ದೇನೆ ಎಂದರೆ ಸರಿ. ನನ್ನ ತಾತ ಆಶಪ್ಪನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಯಲ್ಲಪ ಮತ್ತು ಮೊಗಲಪ್ಪ. ಆಶಪ್ಪನಿಗೆ ಒಬ್ಬಳು ಹೆಣ್ಣು ಮಗಳು ಅವಳ ಹೆಸರು ಆಶಮ್ಮ. ನನ್ನ ತಾತನ ಆಸ್ತಿಗಳು ಮೊಗಲಪ್ಪನಿಗೆ ಆಗಿದ್ದವು ಎಂದರೆ ಸರಿ. ಯಲ್ಲಪ್ಪನಿಗೂ ಭೂಮಿಗಳು ಬಂದಿದ್ದವು ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಭಾಗಕ್ಕೆ ಬಂದ ಸ್ವತ್ತುಗಳು ಚಂದ್ರಕಲಾ ಊರಿನಲ್ಲಿದ್ದವು ಎಂದರೆ ಸರಿ. ಶಾಮಮ್ಮ ನನ್ನ ಅಜ್ಜಿ. ನನ್ನ ಅಜ್ಜಿ ತೀರಿಹೊದ ದಿನಾಂಕ ಮತ್ತು ವರ್ಷ ನನಗೆ ನೆನಪಿಲ್ಲ. ನನ್ನ ತಂದೆ ದಿಃ 01-10-2021 ರಂದು ತೀರಿಹೋಗಿದ್ದಾರೆ.

ನನ್ನ ಅಜ್ಜಿ ಶಾಮಮ್ಮ ಕಲಬುರಗಿ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 03/1985 ನ್ನು ಸಲ್ಲಿಸಿದ್ದಳು ಎಂದರೆ ಸರಿ. ಶಾಮಮ್ಮ ಯಾರ ವಿರುದ್ಧ ದಾವೆ ಹಾಕಿದ್ದಳು ನನಗೆ ಗೊತ್ತಿಲ್ಲ. ಸದರಿ ದಾವೆಯ ದಾಖಲಾತಿಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಶಾಮಮ್ಮನಿಗೆ ಅವರ ತಾಯಿಯಿಂದ ಆಸ್ತಿಗಳು ಬಂದಿದ್ದವು. ಅವಳಿಗೆ ಸಿಲಾರಕೋಟ ಗ್ರಾಮದ ಸ್ವತ್ತುಗಳು ಅವರ ತಾಯಿಯಿಂದ ಬಂದಿದ್ದವು. ಅವುಗಳ ಸರ್ವೆ ನಂ. 185 ವಿಸ್ತೀರ್ಣ 6 ಎಕರೆ 8 ಗುಂಟೆ, ಸರ್ವೆ ನಂ. 363 ವಿಸ್ತೀರ್ಣ 3 ಎಕರೆ 9 ಗುಂಟೆ. ಸರ್ವೆ ನಂ. 379 ರಲ್ಲಿನ 1 ಎಕರೆ 21 ಗುಂಟೆ, ಸರ್ವೆ ನಂ. 254 ವಿಸ್ತೀರ್ಣ 39 ಗುಂಟೆ. ಸರ್ವೆ ನಂ. 36 ವಿಸ್ತೀರ್ಣ 23 ಗುಂಟೆ. ಸರ್ವೆ ನಂ. 35 ವಿಸ್ತೀರ್ಣ 38 ಗುಂಟೆ. ಮೇಲಿನ ಸರ್ವೆ ನಂಬರ ಜಮೀನುಗಳು 1955 ರಲ್ಲಿ ಯಾರ ಹೆಸರಿನಲ್ಲಿದ್ದವು ನನಗೆ ಗೊತ್ತಿಲ್ಲ. ಅವುಗಳಿಗೆ ಸಂಬಂಧ ಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ಅಸಲು ದಾವಾ ನಂ. 03/1985 ದಾವೆಯಲ್ಲಿ ರಾಜಿಯಾಗುತ್ತೇನ ಎಂದು ಹೇಳಿದ್ದರು ಆದರೆ ರಾಜಿ ಆಗಲಿಲ್ಲ ಮುಂದೆ ಆ ಕೇಸ ಏನು ಆಯಿತು ನನಗೆ ಗೋತ್ತಿಲ್ಲ. ಈ ಮೇಲೆ ಹೇಳಿದ ಸಿಲಾರಕೋಟ ಜಮೀನುಗಳಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವುಗಳ ಸಂಬಂಧ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ. 3/1985

ರಲ್ಲಿ ರಾಜಿಯಾದಂತೆ ಪ್ರತಿವಾದಿಯರ ಹೆಸರಿಗೆ ಪಹಣಿ ಆಗಿವೆ ಎಂದರೆ ಸರಿಯಲ್ಲ. ಸದರಿ ರಾಜಿ ಡಿಕ್ರಿ ಪ್ರಕಾರ ಸಿಲಾರಕೋಟದ ಜಮೀನುಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿಯಲ್ಲ. ಮುಟೇಷನ ಆಗಿರುವ ಪ್ರಕಾರ ಪಹಣಿಯಲ್ಲಿ ಹೆಸರಿರುವ ವ್ಯಕ್ತಿಗಳೆ ಸದರಿ ಜಮೀನಗಳ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ನಾವು ಸ್ವಾಧಿನದಲ್ಲಿದ್ದವೆ ಎಂದು ಹೇಳುತ್ತಾರೆ. ನಾವು ಸ್ವಾಧಿನದಲ್ಲಿದ್ದವೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ಅಸಲು ದಾವಾ ನಂ. 03/1985 ರಲ್ಲಿನ ಡಿಕ್ರಿ ಪ್ರಕಾರ ಆದ ಮುಟೇಷನ ಮತ್ತು ಇಲ್ಲಿಯವರೆಗಿನ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನಿನ ದಾಖಲಾತಿಗಳು ಇಲ್ಲದೆ ಇರುವ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಮುಟೇಷನ ಅಥವಾ ಪಹಣಿ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ. 03/1985 ರಲ್ಲಿ ನ ರಾಜಿ ತಪ್ಪಾಗಿದೆ ಎಂದು ಸುಳ್ಳು ಕತೆ ಕಟ್ಟಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು ದಾವಾ ಸ್ವತ್ತುಗಳ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ಯಾವತ್ತು ದಾವಾ ಸ್ವತ್ತುಗಳ ಸ್ವಾಧಿನದಲ್ಲಿ ಇಲ್ಲದಿದ್ದರೂ ಕೂಡ ಹೇಗಾದರೂ ಮಾಡಿ ಪ್ರತಿವಾದಿಯರಿಗೆ ತೊಂದರೆ ಕೊಡಮ ಉದ್ದೇಶದಿಂದ ಸ್ವಾಧಿನದಲ್ಲಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸತ್ತುಗಳ ಪ್ರತಿವದಿಯರ ಹಿರಿಯರ ಸ್ವತ್ತುಗಳಾಗಿದ್ದು ನಂತರ ಪ್ರತಿವಾದಿಯರ ತಂದೆಗೆ ಬಂದು ಅವರು ತೀರಿಹೋದ ನಂತರ ಪ್ರತಿವಾದಿಯರಿಗೆ ಬಂದಿವೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ಆಶಣ್ಣ ರವರಿಗೆ ಬುಗಪ್ಪ ಪೆದ್ದಯಲ್ಲಪ್ಪ, ಚಿನ್ನಯಲ್ಲಪ್ಪ ಮತ್ತು ಹುಸೇನಪ್ಪ ಎಂಬ 4 ಮಕ್ಕಳು ಇದ್ದರು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ನನ್ನ ತಂದೆ ತಾಯಿ ಹೆಸರು ಶಾಮಮ್ಮ. ಶಾಮಮ್ಮನ ತಾಯಿ ಹೆಸರು ಸಾಯಮ್ಮ. ಸಾಯಮ್ಮಳ ಗಂಡನ ಹೆಸರು ಹುಸೇನಪ್ಪ. ಹುಸೇನಪ್ಪನಿಗೆ ಎಷ್ಟು ಜನ ಹೆಂಡತಿಯರು ಎಂದರೆ ಒಬ್ಬರೇ ಎಂದು ಹೇಳುತ್ತಾರೆ. ಹುಸೇನಪ್ಪನಿಗೆ ಸಾಯಮ್ಮಳನ್ನು ಹೊರತು ಪಡಿಸಿ ಇನ್ನೂ 2-3 ಜನ ಹೆಂಡತಿಯರು ಇದ್ದರು ಎಂದರೆ ಸರಿಯಲ್ಲ. ಸಾಯಮ್ಮ ಹುಸೇನಪ್ಪನ ಎರಡನೇ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲನೇ ಹೆಂಡತಿ ಎಂದು ಹೇಳುತ್ತಾರೆ. ಸಾಯಮ್ಮಳ ಆಸ್ತಿ ನಮಗೆ ಬರುತ್ತದೆ ಎಂದು ತಿಳಿದು ಸಾಯಮ್ಮ ಹುಸೇನಪ್ಪನ ಮೊದಲ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1965 ರಿಂದ ಇಲ್ಲಿಯವರೆಗೆ ಪ್ರತಿವಾದಿಯರ ಹಿರಿಯರು ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮಗೂ ದಾವಾ ಸ್ವತ್ತುಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತುಗಳ ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮಾರುಕಟ್ಟೆ ಮೌಲ್ಯ ಹೆಚ್ಚು ಇರುವ ಕಾರಣ ಹೇಗಾದರೂ ಮಾಡಿ ದಾವಾ ಸ್ವತ್ತುಗಳನ್ನು ಪಡೆಯಬೇಕೆಂಬ ದುರುದ್ದೇಶದಿಂದ ದಾವಾ ಸ್ವತ್ತುಗಳ ಸ್ವಾಧಿನದಲ್ಲಿದ್ದೆವೆ ಎಂದು ಸುಳ್ಳು ಕತೆ ಕಟ್ಟಿ ಸುಳ್ಳು ದಾವಾ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಯಾವತ್ತು ದಾವಾ ಸ್ವತ್ತುಗಳು ನಮ್ಮ ಹಿರಿಯರು ಮತ್ತು ನಮ್ಮ ಹೆಸರಿನಲ್ಲಿ ಇರಲಿಲ್ಲ ಮತ್ತು ನಮ್ಮ ಹಿರಿಯರು ಆಗಲಿ ಮತ್ತು ಈಗ ನಾವಾಗಲಿ ಯಾವತ್ತು ದಾವಾ ಸ್ವತ್ತುಗಳ ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ. 35 ರ ಜಮಿನೀನ ಚೆಕಬಂದಿ ನನಗೆ ಗೊತ್ತಿಲ್ಲ. ಉಳಿದ ದಾವಾ ಸ್ವತ್ತುಗಳ ಚೆಕಬಂದಿ ನನಗೆ ಗೊತ್ತು. ದಾವಾ ಸರ್ವೆ ನಂ. 36 ರ ಚೆಕಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ. 36 ರ ಜಮೀನು ದೂರ ಇದೆ ಕಾರಣ ಚೆಕಬಂದಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.254 ರ ಚೆಕಬಂದಿ ಪೂರ್ವಕ್ಕೆ ಬಾಳಪ್ಪ ವಡ್ಡರ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹೈದ್ರಬಾದ ನವರು ಕೊಂಡುಕೊಂಡಿರುವ ಜಮೀನು, ದಕ್ಷಿಣಕ್ಕೆ ಬಾಳಪ್ಪ ವಡ್ಡರ. ಸರ್ವೆ ನಂ. 379 ರ ಚೆಕಬಂದಿ ಪೂರ್ವಕ್ಕೆ ಗೌಟಾರ ಬೀಳು ಭೂಮಿ, ಪಶ್ಚಿಮಕ್ಕೆ ಸರ್ಕಾರಿ ಭೂಮಿ, ಉತ್ತರಕ್ಕೆ ಬಕ್ಕಿ ರಾಮಪ್ಪ, ದಕ್ಷಿಣಕ್ಕೆ ಕಾಡು. ಸರ್ವೆ ನಂ. 185 ರ ಚೆಕಬಂದಿ ಪೂರ್ವಕ್ಕೆ ನರಸರೆಡ್ಡಿ ಪಶ್ಚಿಮಕ್ಕೆ ಬಕ್ಕಿ ನರಸಪ್ಪ, ಉತ್ತರಕ್ಕೆ ಗಾಳಾ ಬಸವರಾಜ, ದಕ್ಷಿಣಕ್ಕೆ ಬಕ್ಕಿ ನರಸಪ್ಪ. ನಾನು ಯಾವತ್ತು ದಾವಾ ಜಮೀನುಗಳಿಗೆ ಹೋಗಿಲ್ಲ ಮತ್ತು ನನಗೆ ದಾವಾ ಜಮೀನುಗಳ ಚೆಕಬಂದಿ ಗೊತ್ತಿಲ್ಲದಿದ್ದರೂ ಕೂಡ ಬೇರೆಯವರು ಹೇಳಿದ್ದನ್ನು ಕೇಳಿಕೊಂಡು ಸುಳ್ಳು ಚೆಕಬಂದಿಗಳನ್ನು ಹೇಳುತ್ತಿದೇನೆ ಸರಿಯಲ್ಲ.

2015 ಯುಗಾದಿಯಂದು ಪ್ರತಿವಾದಿಯರು ನನ್ನ ಸ್ವಾಧಿನತೆಗೆ ತೊಂದರೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಲಾಟ ಆಗಿ ಪಂಚಾಯತಿ ಆಗಿತ್ತು ಎಂದು ಹೇಳುತ್ತಾರೆ. ಪಂಚಯತಿಗೆ ಯಾರು ಯಾರು ಸೇರಿದ್ದರು ನನಗೆ ಗೊತ್ತಿಲ್ಲ. ನಾನು ಹೆಳಿದಂತೆ ಯಾವುದೇ ಪಂಚಾಯತಿ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯುಗಾದಿ 2015 ರಂದು ದಾವಾ ಸ್ವತ್ತುಗಳಿಗೆ ಬಂದು ನನ್ನ ಸ್ವಾಧಿತೆಗೆ ತೋಂದರೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತುಗಳಿಗೂ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಸಾಕ್ಷಿ ತೆಲಗು ಭಾಷಿಕರಾಗಿದ್ದು ಕಾರಣ ವಕೀಲರಾದ ಶ್ರೀಮತಿ**. PRS** ವಕೀಲರ ಸಹಾಯದಿಂದ ಕನ್ನಡಕ್ಕೆ ತುರ್ಜುಮೆ ಮಾಡಿ ದಾಖಲಿಸಿಕೊಳ್ಳಲಾಯಿತು**.)**

ಮರು ವಿಚಾರಣೆ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ**.**